# ಡಾಕ್ಟರ್ ಸಾಹೇಬ್



## ರಾಮಮನೋಹರ ಲೋಹಿಯಾ ಜೀವನಯಾನ

■ ನಟರಾಜ್ ಹುಳಿಯಾರ್
ಕಲೆ: ಎಚ್.ಎಸ್. ಮೋನಪ್ಪ



## ಮರಳಿ ಸ್ವಾತಂತ್ರ್ಯ ಚಳುವಳಿಗೆ; ಸಮಾಜವಾದದ ಕಡೆಗೆ

3

ಲೋಹಿಯಾ ಆದಷ್ಟು ಬೇಗ ಜರ್ಮನಿ ಬಿಡುವುದು ವಾಸಿ ಎಂದಿದ್ದ ಪ್ರೊಫೆಸರ್ ಶೂಮಾಕರ್ ಮೌಖಿಕ ಪರೀಕ್ಷೆಯ ದಿನಾಂಕವನ್ನು ಕೊಂಚ ಮೊದಲೇ ನಿಗದಿ ಮಾಡಿದರು. ಹಿಟ್ಲರ್ ಸರ್ವಾಧಿಕಾರದ ಹಲ್ಲು, ಉಗುರುಗಳು ಮೊನಚಾಗುವ ಮೊದಲೇ ಲೋಹಿಯಾ ಬರ್ಲಿನ್ ಬಿಟ್ಟು ಹೊರಡುವ ಕಾಲ ಬಂತು. ಮೂರು ವರ್ಷಗಳಲ್ಲಿ ಜರ್ಮನ್ ಭಾಷೆ ಕಲಿತಿದ್ದ ಲೋಹಿಯಾ, ಹೊಸ ಹೊಸ ಫಿಲಾಸಫಿಗಳನ್ನು ಓದಿ ಅರಗಿಸಿಕೊಂಡರು; ಹೊಸದಾಗಿ ಕಲಿತ ಜರ್ಮನ್ ಭಾಷೆಯಲ್ಲೇ ಪಿಎಚ್.ಡಿ. ಮಹಾಪ್ರಬಂಧ ಬರೆದರು. ಭಾರತೀಯ ಸಾಮ್ರಾಜ್ಯವನ್ನು ರಕ್ಷಿಸಿಕೊಳ್ಳುವ ಬ್ರಿಟಿಷ್ ಆರ್ಥಿಕ ನೀತಿಗಳ ಹಿಂದಿನ ಉದ್ದೇಶಗಳನ್ನು ವಿಶ್ಲೇಷಿಸಿದ ಮಹಾಪ್ರಬಂಧವನ್ನು ಅರ್ಥಶಾಸ್ತ್ರದಲ್ಲಿ ಡಾಕ್ಟರೇಟ್ ಪದವಿಗಾಗಿ ಬರ್ಲಿನ್ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದರು.

ಚರಿತ್ರೆ, ರಾಜಕೀಯ ವಿಜ್ಞಾನ, ಅರ್ಥಶಾಸ್ತ್ರ ಮುಂತಾದ ಜ್ಞಾನಶಿಸ್ತುಗಳನ್ನು ಒಳಗೊಂಡಿದ್ದ ಮಹಾಪ್ರಬಂಧದ ಮೌಖಿಕ ಪರೀಕ್ಷೆಗೆ ವಿವಿಧ ವಲಯಗಳ ತಜ್ಞರು ಬಂದಿದ್ದರು. ಮನೋವಿಜ್ಞಾನಿ ಸಿಗ್ಮಂಡ್ ಫ್ರಾಯ್ಡ್ ಶಿಷ್ಯ ದೇಸ್ನರ್, ಸಮಾಜವಾದಿ ಅರ್ಥಶಾಸ್ತ್ರಜ್ಞ ಇ.ಎಫ್. ಶೂಮಾಕರ್, ಚರಿತ್ರಕಾರ ಆನ್‌ಕೆನ್ ಪರೀಕ್ಷಕರಾಗಿದ್ದರು. ಮೌಖಿಕ ಪರೀಕ್ಷೆಗೆ ಎಲ್ಲ ಪರೀಕ್ಷಕರೂ ಬಂದು ಕೂತಿದ್ದರು. ಲೋಹಿಯಾ ಹತ್ತು ನಿಮಿಷ ತಡವಾಗಿ ಹೋದರು.

‘ತಡವಾಗಿ ಬಂದ್ರಲ್ಲ?’ ಎಂದರು ಶೂಮಾಕರ್.

ತಡವಾಗಿ ಬಂದದ್ದಕ್ಕೆ ಕ್ಷಮೆ ಕೋರಿದ ಲೋಹಿಯಾ, ‘ಚೀನಾದವರಿಗೆ ಹೋಲಿಸಿದರೆ ಭಾರತೀಯರು ಬೇಗ ಸುಸ್ತಾಗುತ್ತಾರೆ ಅಂತ ನೀವೇ ಬರೆದಿದ್ದೀರಲ್ಲ?’ ಎಂದು ಶೂಮಾಕರ್ ಕಡೆ ನೋಡಿ ನಕ್ಕರು.